


ಗಿಳಿಯನ್ನು ಎಲ್ಲಿಡುತ್ತಾನೆಂಬ ಕುತೂಹಲದಿಂದ ನೋಡಿದರೆ ಆ ಖದೀಮ ನಿಧಾನವಾಗಿ ಮರದ ಬುಡದಲ್ಲಿ ಗೋಣಿ ಮುಚ್ಚಿ ಇಟ್ಟ ಇನ್ನೊಂದು ಗೂಡನ್ನು ಹೊರ ತೆಗೆದಿದ್ದ. ಅದರಲ್ಲಿ ಇನ್ನೊಂದು ಗಿಳಿಯೂ ಇತ್ತು. ಹೀಗೆ ಎಷ್ಟೊಂದು ಗಿಳಿಗಳನ್ನಿಟ್ಟುಕೊಂಡಿದ್ದಾನೋ ಈ ಬಡವ ಎಂದು ನೋಡುವ ಅನ್ನಿಸಿದರೂ 'ಅವನ ವ್ಯವಹಾರ ಅವನಿಗೆ' ಎಂದುಕೊಳ್ಳುತ್ತಾ ಮಾರಾಟದ ದಂಧೆಯನ್ನೇ ಉದ್ಯೋಗವನ್ನಾಗಿ ಮಾಡಿಕೊಂಡ ತನ್ನನ್ನೇ ಮೀರಿಸಿದ ಗಿಳಿ ಶಾಸ್ತ್ರದವನ ಮಾರಾಟ ತಂತ್ರವನ್ನು ಮೆಚ್ಚುತ್ತಾ ಮನೆಗೆ ಬಂದಿದ್ದ. ಧೈರ್ಯವಾಗಿಯೇ ಗಿಳಿಯನ್ನು ಕೊಂಡುಕೊಂಡಿದ್ದರೂ ತನ್ನ ಮಾರಾಟ ವೈಖರಿಯಿಂದ ಊರೆಲ್ಲವನ್ನೂ ಗೆಲ್ಲುತ್ತಿದ್ದ ತನಗೆ ಈಗ ತನ್ನ ಮನೆಯವರನ್ನು ಗೆಲ್ಲಲು ಸಾಧ್ಯವಾದೀತೇ ಎನ್ನುವ ಸಂಶಯ ದಾರಿಯುದ್ದಕ್ಕೂ ಕಾಡುತ್ತಲೇ ಇತ್ತು ಅವನನ್ನು.

ಅವನ ಸಂಶಯ ಸರಿಯಾದದ್ದೇ ಆಗಿತ್ತು. ಮನೆಯಲ್ಲಿ ರಂಪಾಟವೇ. ಹೆಂಡತಿ 'ಇದೊಂದು ಅನಿಷ್ಟ ಕಡಿಮೆಯಾಗಿತ್ತು' ಎಂದು ಮುಖ ಊದಿಸಿ ಕೊಂಡವಳು ಇವನ ಯಾವ ರಮಿಸುವಿಕೆಗೂ ಮಣಿದಿರಲಿಲ್ಲ. ಹಾಗೆಂದು ದುಡ್ಡು ಕೊಟ್ಟು ತಂದ ಗಿಣಿ ಮತ್ತು ಪಂಜರವನ್ನು ಬೀದಿಗೆ ಎಸೆಯಲಾಗುತ್ತದೆಯೇ. ಅದೂ ಅಷ್ಟೊಂದು ಆಸೆಯಿಂದ ತಂದದ್ದು! ಗಿಣಿಯ ಮುದ್ದು ಮಾತಿನಿಂದಾದರೂ ಕ್ರಮೇಣ ತನ್ನ ಮುದ್ದಿನ ಗಿಣಿಯ ಕೋಪ ಶಮನವಾಗಬಹುದು ಎನ್ನುವ ಆಸೆ.

ಅವನ ಆಸೆ ನಿರಾಸೆಯಾಗಲಿಲ್ಲ. ಮೊದ ಮೊದಲು ತನ್ನ ಹಿಂದಿನ ಯಜಮಾನ ಹೇಳಿಕೊಟ್ಟ ಮುದ್ದು ಮಾತುಗಳನ್ನು ಕ್ರೂರ ಭಾಷೆಯಲ್ಲಿ ಆಡುತ್ತ ನಗೆಪಾಟಲಿಗೀಡಾಗುತ್ತಿದ್ದ ಅದೇ ಗಿಳಿ ಕ್ರಮೇಣ ಸುಸಂಸ್ಕೃತವೆಂದು ಅವನೇ ಎಣಿಸಿದ್ದ ಅವರ ಭಾಷೆಗೆ ಒಗ್ಗಿಕೊಂಡಿತ್ತು. ಮತ್ತು ನೀಟಾಗಿ ಅವನ ಹೆಂಡತಿಯ ಮಾತುಗಳನ್ನು ಕಂಠ ಪಾಠ ಒಪ್ಪಿಸುತ್ತ ಅವಳ ಮನಸ್ಸನ್ನು ಗೆದ್ದಿತ್ತು. ಅತಿಥಿಗಳು ಬಂದರೆ 'ಬನ್ನಿ ಚಾಮೀ ಕುಲಿತುಕೊಲ್ಲಿ' ಎಂದು ರಾಗವಾಗಿ ಹೇಳಿ ಮನೆಯವಳ ಮುಖದ ಬಿಗಿ ಸಡಿಲವಾಗುವಂತೆ ಮಾಡಿತ್ತು. ಅಷ್ಟೇ ಅಲ್ಲ ಬಂದವರೊಡನೆ ಆಕೆಯೇ ಹೇಳತೊಡಗಿದ್ದಳು 'ನಮ್ಮ ಮನೆಯವರೊಂದು ಗಿಳಿ ತಂದಿದ್ದಾರೆ. ಎಷ್ಟು ಚನ್ನಾಗಿ ಮಾತಾಡುತ್ತದೆ ಅಂತೀರ.. ನಮ್ಮ ಮಗುವಿನಂತೆಯೇ..' ಆಗಷ್ಟೇ ಅಂಬೆಗಾಲಿಡುತ್ತ ಮನೆಯೆಲ್ಲ ತಿರುಗಾಡುತ್ತಿದ್ದ ಅವರ ಮಗು ತೊದಲು ಮಾತುಗಳನ್ನಾಡಲು ಪ್ರಯತ್ನಿಸುತ್ತ ಮನೆಯವರಿಗೆಲ್ಲ ಮುದ ನೀಡುತ್ತಿತ್ತು. ಹೆಂಡತಿಯ ಸಂತೋಷ ಕಂಡು ಅವನಿಗೂ ಖುಷಿ.

ದಿನಗಳು ಕಳೆಯುತ್ತಿದ್ದುವು. ಮಗು ದೊಡ್ಡವನಾಗುತ್ತಿದ್ದ. ಕಪ್ಪಾಗತೊಡಗಿದ್ದ ಅವನ ಮೂಗಿನಡಿ ಕೂದಲು ದಟ್ಟವಾಗುವುದರ ಜೊತೆಗೆ ಸ್ವರ ಗಡುಸಾಗ ತೊಡಗಿತ್ತು. ಅದರೊಂದಿಗೆ ಮಾತಿನ ಧಾಟಿಯೂ ಬದಲಾಗತೊಡಗಿತ್ತು. ಬದುಕಿನ ಬಗ್ಗೆ ಮೊಳೆಯ ತೊಡಗಿದ ಅಸಹನೆ ಮಾತಿನಲ್ಲೂ ಧ್ವನಿಸತೊಡಗಿತ್ತು.

ಎಷ್ಟೇ ಪ್ರೀತಿಯಿಂದ ತಂದಿದ್ದರೂ ಕೆಲಸದ ನಡುವೆ ಗಿಳಿಯ ಬಗ್ಗೆ ಅಷ್ಟೊಂದು ಗಮನ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟಕ್ಕೂ ಮನೆಯ ಯಜಮಾನಿತಿಯ ಮನವನ್ನು ಗೆದ್ದು ಬಿಟ್ಟಿತ್ತಲ್ಲ ಅದು. 'ನಿಮಗೆ ಮನೆ ಮಕ್ಕಳು ಬೇಡ. ಮೂರು ಹೊತ್ತೂ ಕೆಲಸ ಕೆಲಸ.. ಮಗು ಓದುತ್ತಿದ್ದಾನೆಯೇ.. ಸಮಯಕ್ಕೆ ಸರಿಯಾಗಿ ಮನೆಗೆ ಬರುತ್ತಾನೆಯೇ ಒಂದೂ ಚಿಂತೆಯಿಲ್ಲ ನಿಮಗೆ...'ಗಿಳಿಯೇ ಹೇಳುತ್ತಿದೆ ಯೇನೋ ಎಂದುಕೊಂಡಿದ್ದ. ಅಲ್ಲ ಅದು ಗಿಳಿಯ ಒಡತಿ. ಗಂಡನನ್ನು ದೂರುವುದು ಹೆಂಗಸರ ಹಕ್ಕು ತಾನೇ. ಸುಮ್ಮನೆ ಹೂಂಗುಟ್ಟಿದ್ದ. 'ದುಡಿಯುವ ಕಾಲದಲ್ಲಿ ದುಡಿದರೆ ತಾನೇ ದುಡಿಯಲಾಗದ ಕಾಲದಲ್ಲೂ ಊಟ ಮಾಡಲಿಕ್ಕಾಗುವುದು' ಎನ್ನಬೇಕೆಂದುಕೊಂಡರೂ ಹೇಳಲಿಲ್ಲ.

ಒಂದು ರಜೆಯ ದಿನ ಇದ್ದದ್ದರಲ್ಲಿ ಪುರುಸೊತ್ತು ಮಾಡಿಕೊಂಡು ಮನೆಯಲ್ಲೇ ಇದ್ದ. ಪ್ರೀತಿಯ ಗಿಳಿಯನ್ನು ನೋಡಲು ಹೋದರೆ ಮೊದಲಿನ ಹಾಗೆ ಅದು ಪ್ರೀತಿಯಿಂದ ಮೂಸಿ ಕೊಕ್ಕನ್ನು ಉಜ್ಜುವುದು ಬಿಡಿ. ಪಂಜರದ ಮೂಲೆಯನ್ನು ಸೇರಿ ದುರುಗುಟ್ಟಿಕೊಂಡು ನೋಡಿತ್ತು. ಆದರೂ ಹಳೆಯದೇನಾದರೂ ನೆನಪಾಗಬಹುದೇನೋ ಎಂದು ಬಾಲ ಭಾಷೆಯಲ್ಲಿ ಮಾತನಾಡಿದರೆ ಉತ್ತರಿಸುವುದು ಹೋಗಲಿ 'ಯಾಕೆ ಬಂದ್ರಿ.. ಬೇರೆ ಕೆಲಸವಿಲ್ಲವಾ.. ಬಿಟ್ಟು ಬಿಡಿ ನನ್ನನ್ನು ನನ್ನಷ್ಟಕ್ಕೆ' ಎಂದು ನಿಷ್ಠುರವಾಗಿ ಹೇಳಿ ಬಿಟ್ಟಿತ್ತು. ಮುಖದ ಗಂಟು ಸಡಿಲಿಸಿರಲಿಲ್ಲ. ಮಾತಿನ ಗಡಸುತನ ಇವನನ್ನು ಹೆದರಿಸಿತ್ತು. ಕೊಡಲೆಂದು ತೆಗೆದುಕೊಂಡು ಹೋಗಿದ್ದ ಮೆಣಸಿನ ಕಾಯಿ ಮತ್ತು ಬಾಳೆ ಹಣ್ಣನ್ನು ಗೂಡಿನೊಳಗಿಟ್ಟು ತೆಪ್ಪನೇ ಬಂದಿದ್ದ. ಎಷ್ಟೆಂದರೂ ನಾನೇ ಆಸೆಯಿಂದ ತಂದ ಗಿಳಿಯಲ್ಲವೇ ಎಂದುಕೊಳ್ಳುತ್ತ.

ವಯಸ್ಸಾಗುತ್ತಿತ್ತು. ಹಾಗೆಯೇ ನಿವೃತ್ತಿಯೂ ಆಗಿತ್ತು. ಈ ನಡುವೆ ಮಗನಿಗೆ ಮದುವೆ ಮಾಡಿದ್ದ. ಅವನಿಗೊಂದು ಮಗುವೂ ಆಗಿತ್ತು. ನಿವೃತ್ತನಾಗಿ ಹೆಚ್ಚಿನ ಸಮಯವನ್ನು ಮನೆಯಲ್ಲೇ ಕಳೆಯುತ್ತಿದ್ದ ಇವನಿಗೊಂದು ಆಸೆ. ಪುಟ್ಟ ಮಗು ಅಂಬೆಗಾಲಿಕ್ಕುತ್ತ ಮನೆ ತುಂಬ ಓಡಾಡೀತೇ... ಗಿಳಿ ಆಗಲೇ ಮರೆತಿದ್ದ ತೊದಲು ಮಾತುಗಳನ್ನು ಪುನಃ ಆಡ ತೊಡಗೀತೇ ಎಂದು. ನಿರೀಕ್ಷಿಸುತ್ತಲೇ ಇದ್ದ. ಆಗಲೇ ಮಗ ಪ್ರೈವೆಸಿ ಬೇಕು. ಮಹಡಿಯ ಮೇಲೆ ಒಂದು ರೂಮು ಕಟ್ಟಿಸುತ್ತೇನೆ' ಎಂದು ಹಣಕ್ಕಾಗಿ ಕೈ ಚಾಚಿದರೆ ನಿವೃತ್ತಿಯ ಸಮಯದಲ್ಲಿ ಬಂದಿದ್ದ ಹಣವನ್ನೆಲ್ಲ ಕೊಟ್ಟುಬಿಟ್ಟಿದ್ದ ಏನಿದ್ದರೂ ಎಲ್ಲ ಅವನಿಗೇ ಅಲ್ಲವೇ ಎಂದುಕೊಳ್ಳುತ್ತ.

ತಾನೇ ತಂದ ಗಿಳಿ. ಬಹಳ ದಿನಗಳಿಂದ ಗಮನವನ್ನೇ ಕೊಡಲಿಲ್ಲ ಎಂಬುದು ಮನಸ್ಸಿಗೆ ಬಂದಾಗ ಕೆಟ್ಟದೆನಿಸಿತ್ತು. ಇನ್ನಾದರೂ ಅದನ್ನು ಗಮನಿಸಿಕೊಳ್ಳಬೇಕು ಎಂದುಕೊಳ್ಳುತ್ತಲೇ ಪ್ರೀತಿ ಉಕ್ಕಿ ಬಂದ ಒಂದು ಬೆಳಿಗ್ಗೆ ಎಲ್ಲ ಅವರವರ ಕೆಲಸದ ಮೇಲೆ ಹೋದ ನಂತರ ಅದೇ ಮಾಮೂಲಿ ಕೆಂಪು ಮೆಣಸು ಮತ್ತು ಬಾಳೆ ಹಣ್ಣನ್ನು ತೆಗೆದುಕೊಂಡು ಗಿಳಿಯ ಕಡೆ ಹೋದರೆ ಅದು ಗುರ್ರಾಯಿಸಿತ್ತು. ಊಟ ನೋಡಿದರಾದರೂ ಸಮಾಧಾನ ವಾಗಬಹುದೇನೋ ಎಂದು ಗೂಡಿನ ಬಾಗಿಲು ತೆರೆದು ಕೈ ಒಳಗೆ ಹಾಕಿದರೆ ಕೈಯ್ಯಲ್ಲಿದ್ದ ಕೆಂಪು ಮೆಣಸಿನ ಕಾಯಿಗಿಂತ ಕೆಂಪು ಮುಖ ಮಾಡಿಕೊಂಡ ಆ ಗಿಳಿ 'ಯಾಕೆ ಇದ್ದೀರಾ ಇನ್ನೂ... ಕೂಳಿಗೆ ದಂಡ. ಭೂಮಿಗೆ ಭಾರ. ಮನೆಯಲ್ಲಿರುವ ಮಂದಿ ಸಾಲದಾ...' ಎಂದು ಕೀರಲು ಸ್ವರದಲ್ಲಿ ಕಿರಿಚುತ್ತ ಕೈಯ್ಯನ್ನ ಕುಕ್ಕಿಯೇ ಬಿಟ್ಟಿತ್ತು.